# All India Radio: Bangalore
# National Bulletin In Kannada
# 15.08.2026  7.35 pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

**೧. ದೇಶಾದ್ಯಂತ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆ; ವಿಕಸಿತ ಭಾರತಕ್ಕಾಗಿ ಸಪ್ತಧಾರಾ ಶಕ್ತಿಯ ಬಳಕೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ**

**೨. ಕರ್ನಾಟಕದಲ್ಲಿ ಸಡಗರದ ಸ್ವಾತಂತ್ರ್ಯೋತ್ಸವ; ವಿದೇಶಗಳಲ್ಲೂ ಹಾರಾಡಿದ ತ್ರಿವರ್ಣ ಧ್ವಜ**

**೩. ಕಿರು ತೆರಿಗೆ ಪಾವತಿದಾರರ ವಿದೇಶಿ ಆಸ್ತಿ ಬಹಿರಂಗ ಯೋಜನೆಗೆ ಅಧಿಸೂಚನೆ ಪ್ರಕಟ; ನಾಳೆಯಿಂದ ಜಾರಿ**

**೪. ಭಾರತ-ಶ್ರೀಲಂಕಾ ನಡುವಣ ಐಸಿಸಿ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಶಿಪ್; ಮೊದಲ ಇನ್ನಿಂಗ್ಸ್‌ನ ಮೊದಲ ದಿನದಾಟದಂತ್ಯಕ್ಕೆ ಭಾರತ ೨ ವಿಕೆಟ್ ನಷ್ಟಕ್ಕೆ ೨೮೮ ರನ್**

**<>><><*><><<>**

’ವಿಕಸಿತ ಭಾರತ’ದ ಗುರಿ ಸಾಕಾರಕ್ಕೆ ಉದ್ಯಮಿಗಳು, ರೈತರು, ಯುವಜನರು ಸೇರಿದಂತೆ ಸಮಾಜದ ಎಲ್ಲರೂ ಸರ್ಕಾರದೊಂದಿಗೆ ಕೈಜೋಡಿಸುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.  ನವದೆಹಲಿಯ ಐತಿಹಾಸಿಕ ಕೆಂಪುಕೋಟೆಯಲ್ಲಿ ಇಂದು ೮೦ನೇ ಸ್ವಾತಂತ್ರ್ಯ ದಿನದ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಅನಿರೀಕ್ಷಿತ ಬಿಕ್ಕಟ್ಟುಗಳನ್ನು ಸಮರ್ಥವಾಗಿ ಎದುರಿಸಿ, ದೇಶವು ೨೦೪೭ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವತ್ತ ಸಾಗಿದೆ ಎಂದರು. ಇದೇ ಮೊದಲ ಬಾರಿಗೆ ಕೆಂಪುಕೋಟೆಯಲ್ಲಿ ರಾಷ್ಟ್ರೀಯ ಗೀತೆ ವಂದೇ ಮಾತರಂ ಅನುರಣಿಸಿತು. ಭಾರತೀಯ ವಾಯುಪಡೆಯ ಎರಡು ಎಮ್‌ಐ-೧೭ ಹೆಲಿಕಾಪ್ಟರ್‌ಗಳಲ್ಲಿ ಪುಷ್ಪವೃಷ್ಟಿಯೊಂದಿಗೆ ರಾಷ್ಟ್ರಧ್ವಜಾರೋಹಣ ನೆರವೇರಿತು. ಕಳೆದ ಹನ್ನೆರಡು ವರ್ಷಗಳಲ್ಲಿ ನಾಗರಿಕರು ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಸಾಧ್ಯವಿರುವ ಎಲ್ಲ ಪ್ರಯತ್ನ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿರುವ ಪ್ರಧಾನಮಂತ್ರಿಗಳು, ಒಂದು ಕಾಲದಲ್ಲಿ ದುರ್ಬಲ ಐದು ಆರ್ಥಿಕತೆಗಳಲ್ಲಿ ಒಂದಾಗಿದ್ದ ಭಾರತವು ಈಗ ವಿಶ್ವದ ಪ್ರಮುಖ ಮತ್ತು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದರು. ಸಂಪನ್ಮೂಲಗಳ ಕೊರತೆಯಿಂದಾಗಿ ದೇಶದ ಪ್ರಗತಿ ಸ್ಥಗಿತಗೊಳ್ಳುವುದಿಲ್ಲ, ಬದಲಿಗೆ ಚಿಂತನೆಯ ಮಿತಿಗಳಿಂದಾಗಿ ಪ್ರಗತಿ ಸಾಧ್ಯವಾಗುವುದಿಲ್ಲ. ಇಂದು ಭಾರತ ಕಚ್ಚಾ ತೈಲವನ್ನು ಅವಲಂಬಿಸಬೇಕಾಗಿದೆ ಮತ್ತು ಇದು ಚಿಂತನೆಯ ಮಿತಿಗಳ ಪರಿಣಾಮವೂ ಆಗಿದೆ ಎಂದು ಅವರು ಹೇಳಿದ್ದಾರೆ.  ಒಂದು ಕಾಲದಲ್ಲಿ ನಿಷೇಧಿತ ವಲಯಗಳಾಗಿ ಗೊತ್ತುಪಡಿಸಲಾದ ೯೯ ಪ್ರತಿಶತದಷ್ಟು ಕಡಲಾಚೆಯ ಪ್ರದೇಶಗಳನ್ನು ಸರ್ಕಾರ ಮುಕ್ತಗೊಳಿಸಿ, ಅವುಗಳನ್ನು ಮುಂದುವರಿಯುವ ಪ್ರದೇಶಗಳಾಗಿ ಪರಿವರ್ತಿಸಿದೆ ಎಂದು ಹೇಳಿರುವ ಪ್ರಧಾನಮಂತ್ರಿ, ಸರ್ಕಾರವು ಈಗ ಸಮುದ್ರದ ಕೆಳಗೆ ಅನ್ವೇಷಣೆಯನ್ನು ಸಕ್ರಿಯವಾಗಿ ಮುಂದುವರಿಸುತ್ತಿದೆ ಮತ್ತು ಹೊಸ ನಿಕ್ಷೇಪಗಳನ್ನು ಕಂಡುಹಿಡಿಯಲು ಪ್ರಯತ್ನಗಳನ್ನು ಮಾಡುತ್ತಿದೆ ಎಂದರು. ಸಪ್ತಧಾರಾ ಎಂಬ ಏಳು ಶಕ್ತಿಯ ಧಾರೆಗಳ ಅನುಷ್ಠಾನಕ್ಕೆ ಕರೆ ನೀಡಿದ ಅವರು, ದೇಶವು ವೇಗವಾಗಿ ಪ್ರಗತಿ ಹೊಂದಲು ಉತ್ಪಾದನಾ ಶಕ್ತಿ, ಆಹಾರ ಉತ್ಪಾದನೆ, ರಕ್ಷಣಾ ಶಕ್ತಿ, ಗತಿಶಕ್ತಿ, ತಂತ್ರಜ್ಞಾನ, ನೀಲಿ ಆರ್ಥಿಕತೆ ಮತ್ತು ಮೃದುಶಕ್ತಿಯ ಏಳು ಧಾರೆಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಅವರು ವಿವರಿಸಿದರು.  ಮುಂದಿನ ಒಂದು ವರ್ಷದಲ್ಲಿ ಒಂದು ಕೋಟಿ ಯುವಕರಿಗೆ ಕೃತಕ ಬುದ್ಧಿಮತ್ತೆ - ಎಐ ಕೌಶಲ್ಯ ತರಬೇತಿ ನೀಡಲು ಸರ್ಕಾರ ನಿರ್ಧರಿಸಿದೆ. ಜಾಗತಿಕ ಎಐ ವಲಯದಲ್ಲಿ ಮುಂಚೂಣಿಯಲ್ಲಿರಲು ಇದರಿಂದ ಯುವಸಮೂಹಕ್ಕೆ ಅನುಕೂಲವಾಗಲಿದೆ ಎಂದು ಪ್ರಧಾನಮಂತ್ರಿ ಹೇಳಿದರು.  ಭಾರತದಲ್ಲಿ ಮುಂದಿನ ೭-೮ ವರ್ಷಗಳಲ್ಲಿ ಇನ್ನೂ ೫ ರಿಂದ ೮ ಸೆಮಿಕಂಡಕ್ಟರ್ ಸ್ಥಾವರಗಳು ಕಾರ್ಯಾಚರಣೆಯನ್ನು ಪ್ರಾರಂಭಿಸಲಿವೆ. ಮೂರು ಸೆಮಿಕಂಡಕ್ಟರ್ ಉತ್ಪಾದನಾ ಸ್ಥಾವರಗಳಲ್ಲಿ ಈಗಾಗಲೇ ಉತ್ಪಾದನೆ ಪ್ರಾರಂಭವಾಗಿದ್ದು, ಅರೆವಾಹಕ ವಲಯದಲ್ಲಿ ದೇಶದ ಪ್ರಗತಿಯು ಅದರ ಹೆಚ್ಚುತ್ತಿರುವ ತಾಂತ್ರಿಕ

ಸ್ವಾವಲಂಬನೆಯನ್ನು ಪ್ರತಿಬಿಂಬಿಸಿದೆ ಎಂದು ಪ್ರಧಾನಮಂತ್ರಿ ತಿಳಿಸಿದರು. ಆಧುನಿಕ ತಂತ್ರಜ್ಞಾನವು ಸಂಪೂರ್ಣವಾಗಿ ನಿರ್ಣಾಯಕ ಖನಿಜಗಳ ಮೇಲೆ ಅವಲಂಬಿತವಾಗಿದ್ದು, ಈ ವಲಯದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಭಾರತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಾ ರಾಷ್ಟ್ರೀಯ ನಿರ್ಣಾಯಕ ಖನಿಜಗಳ ಮಿಷನ್ ಅನ್ನು ಪ್ರಾರಂಭಿಸಿದೆ ಮತ್ತು ನಿರ್ಣಾಯಕ ಖನಿಜ ಕಾರಿಡಾರ್ ಅನ್ನು ಘೋಷಿಸಿದೆ ಎಂದು ಪ್ರಧಾನಮಂತ್ರಿ ಹೇಳಿದರು. ದೇಶವು ವೆಚ್ಚ, ಗುಣಮಟ್ಟ ಮತ್ತು ಕೌಶಲ್ಯ - ಈ ಮೂರು ವಿಷಯಗಳ ಮೇಲೆ ಗಮನಹರಿಸಬೇಕು, ಜಾಗತಿಕವಾಗಿ ಭಾರತದ ಸ್ಥಾನವನ್ನು ಬಲಪಡಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಸರ್ಕಾರ ಹೊಂದಿದೆ. ಮುಂಬರುವ ದಶಕದಲ್ಲಿ ಫಾರ್ಚೂನ್ ೫೦೦ ಕಂಪನಿಗಳಲ್ಲಿ ಭಾರತವು ೫೦ ಕಂಪನಿಗಳನ್ನು ಹೊಂದುವ ಗುರಿ ಹೊಂದಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ.

<>><><*><><<>

ಕರ್ನಾಟಕದಾದ್ಯಂತ ಇಂದು ೮೦ನೇ ಸ್ವಾತಂತ್ರ್ಯ ದಿನವನ್ನು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಸರ್ಕಾರಿ ಕಚೇರಿಗಳು, ಸಂಘಸಂಸ್ಥೆಗಳು, ವಸತಿ ಸಮುಚ್ಚಯಗಳು ಸೇರಿದಂತೆ ವಿವಿಧೆಡೆ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದವರನ್ನು ಸ್ಮರಿಸಲಾಯಿತು. ರಾಜಕೀಯ ಪಕ್ಷಗಳು ಕೂಡ ತಮ್ಮ ಕಚೇರಿಗಳಲ್ಲಿ ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಿಗೆ ಗೌರವ ನಮನ ಸಲ್ಲಿಸಿದವು. ವಿವಿಧ ಸಂಘಸಂಸ್ಥೆಗಳ ಆಶ್ರಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಈ ಸಂಜೆ ಆಯೋಜಿಸಲಾಗಿದೆ. ೮೦ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಮನೆ ಮನೆಗಳಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಾಡಿದ್ದು ೧೭ನೇ ತಾರೀಖಿನವರೆಗೆ ನಡೆಯಲಿದೆ. ಲೋಕಭವನದಲ್ಲಿ ಇಂದು ಬೆಳಗ್ಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಧ್ವಜಾರೋಹಣ ನೆರವೇರಿಸಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ಪ್ರಧಾನ ಸಮಾರಂಭದಲ್ಲಿ ತ್ರಿವರ್ಣ ಧ್ವಜಾರೋಹಣ ಮಾಡಿ ಗೌರವ ಸಲ್ಲಿಸಿದರು. ರಾಜ್ಯದ ಐತಿಹಾಸಿಕ ಕಟ್ಟಡಗಳಿಗೆ ವರ್ಣ ರಂಜಿತ ವಿದ್ಯುತ್ ಅಲಂಕಾರ ಮಾಡಲಾಗಿದ್ದು, ಬೆಂಗಳೂರಿನ ವಿಧಾನಸೌಧದಲ್ಲಿ ಫ್ರೀಡಂ ಹಬ್ಬ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದೆ.

<>><><*><><<>

ವಿವಿಧ ದೇಶಗಳಲ್ಲಿನ ಭಾರತೀಯ ರಾಯಭಾರ ಕಚೇರಿಗಳಲ್ಲೂ ಇಂದು ಭಾರತದ ೮೦ ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ತ್ರಿವರ್ಣ ಧ್ವಜಾರೋಹಣದ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ರಾಷ್ಟ್ರಗೀತೆ, "ವಂದೇ ಮಾತರಂ", ದೇಶಭಕ್ತಿ ಗೀತೆಗಳು ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭಾಷಣದ ಆಯ್ದ ಭಾಗಗಳನ್ನು ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾಯಿತು. ಸಿಂಗಾಪುರ, ಚೀನಾ, ಹಾಂಗ್ ಕಾಂಗ್‌ನಲ್ಲಿ ಸೇರಿದಂತೆ ವಿವಿಧ ದೇಶಗಳಲ್ಲಿನ ಅನಿವಾಸಿ ಭಾರತೀಯರು ಸ್ವಾತಂತ್ರ್ಯ ದಿನದ ಸಂಭ್ರಮದಿಂದ ಆಚರಿಸಿದ್ದು, ಅಲ್ಲಿನ ಜನರೊಂದಿಗೆ ಭಾರತದ ಜನರ ಬಾಂಧವ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

<>><><*><><<>

ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ವಿಶಿಷ್ಟ ಮತ್ತು ಸಾಂಕೇತಿಕ ರೀತಿಯಲ್ಲಿ ಆಚರಿಸಲು ಇಂದು ’ಸೂರ್ಯಪಥ ತಿರಂಗ ಗ್ಲೋಬಲ್ ರಿಲೇ’ಯನ್ನು ಆಯೋಜಿಸಲಾಗಿದೆ. ಈ ಉಪಕ್ರಮವು ಸೂರ್ಯನ ಪಥದಂತೆ ರಾಷ್ಟ್ರ ಧ್ವಜವು ಪಯಣಿಸುವಂತೆ ನೋಡುವುದಾಗಿದೆ. ಜರ್ಮನಿ, ನೆದರ್‌ಲ್ಯಾಂಡ್ಸ್, ಇಟಲಿ, ಈಜಿಪ್ಟ್, ಲಾಟ್ವಿಯಾ ಮತ್ತು ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ರಾಷ್ಟ್ರದ ಹೆಮ್ಮೆ ಮತ್ತು ಏಕತೆಯ ಈ ಆಚರಣೆಗಾಗಿ ಅನಿವಾಸಿಯರನ್ನು ಒಗ್ಗೂಡಿಸಿವೆ ಎಂದು ಸಂಸ್ಕೃತಿ ಸಚಿವಾಲಯ ತಿಳಿಸಿದೆ.

<>><><*><><<>

ಸಣ್ಣ ತೆರಿಗೆದಾರರ ವಿದೇಶಿ ಆಸ್ತಿಗಳು - ಬಹಿರಂಗಪಡಿಸುವಿಕೆ ಯೋಜನೆ ನಿಯಮಗಳು, ೨೦೨೬ ಅನ್ನು ಕೇಂದ್ರೀಯ ನೇರ ತೆರಿಗೆ ಮಂಡಳಿ - ಸಿಬಿಡಿಟಿ ಅಧಿಸೂಚಿಸಿದೆ. ಅರ್ಹ ತೆರಿಗೆದಾರರು ನಿರ್ದಿಷ್ಟ ತೆರಿಗೆ ಅಥವಾ ಶುಲ್ಕವನ್ನು ಪಾವತಿಸಿ, ಕೆಲವು ಬಹಿರಂಗಪಡಿಸದ ವಿದೇಶಿ ಆಸ್ತಿಗಳು, ಬಹಿರಂಗಪಡಿಸದ ವಿದೇಶಿ ಆದಾಯ ಅಥವಾ ಘೋಷಿಸದ ವಿದೇಶಿ ಆಸ್ತಿಗಳನ್ನು ಘೋಷಿಸಲು ಇದು ಅನುವು ಮಾಡಿಕೊಡಲಿದೆ. ಈ ಯೋಜನೆ ನಾಳೆಯಿಂದ

ಜಾರಿಗೆ ಬರಲಿದ್ದು, ಈ ಯೋಜನೆಯಡಿಯಲ್ಲಿ ಘೋಷಣೆ ಸಲ್ಲಿಸಲು ಈ ವರ್ಷಾಂತ್ಯ ಕೊನೆಯ ದಿನವಾಗಿದೆ. ಈ ದಿನಾಂಕದ ನಂತರ ಯಾವುದೇ ಘೋಷಣೆ ಸಲ್ಲಿಸಲು ಅವಕಾಶವಿರುವುದಿಲ್ಲ. ಇದು ಒಂದು ಬಾರಿ ಸ್ವಯಂಪ್ರೇರಿತ ಬಹಿರಂಗಪಡಿಸುವಿಕೆ ಯೋಜನೆಯಾಗಿದೆ. ತೆರಿಗೆದಾರರಿಗೆ ಈ ಬಗ್ಗೆ ಅರಿವು ಮೂಡಿಸಲು ಆದಾಯ ತೆರಿಗೆ ಇಲಾಖೆಯು ಯೋಜನೆ ಮತ್ತು ನಿಯಮಗಳ ಕುರಿತ ಸಮಗ್ರ ಪ್ರಶ್ನೋತ್ತರವನ್ನು ಬಿಡುಗಡೆ ಮಾಡಿದೆ ಎಂದು ಸಿಬಿಡಿಟಿ ತಿಳಿಸಿದೆ.

**<>><><*><><<>**

ದೇಶದ ೮೦ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಬೆಂಗಳೂರಿನಲ್ಲಿರುವ ರಾಜ್ಯಪಾಲರ ಅಧಿಕೃತ ನಿವಾಸ ಲೋಕಭವನ ವೀಕ್ಷಣೆಗೆ ನಾಳೆಯಿಂದ ಮೂರು ದಿನಗಳ ಕಾಲ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಈ ಅವಧಿಯಲ್ಲಿ ಪ್ರತಿದಿನ ಸಂಜೆ ೫.೩೦ ರಿಂದ ೭.೩೦ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದಾಗಿದ್ದು, ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ನಿಯಮಾನುಸಾರ ಲೋಕಭವನಕ್ಕೆ ಭೇಟಿ ನೀಡಬಹುದಾಗಿದೆ.

**<>><><*><><<>**

ದೂರಸಂಪರ್ಕ ಇಲಾಖೆ ಆಯೋಜಿಸಿರುವ ಪುಣೆಯ ಬ್ರಿಕ್ಸ್ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ - ಐಟಿಸಿ ಟ್ರ್ಯಾಕ್ ನಾಳೆಯಿಂದ ೨೧ ರವರೆಗೆ ನಡೆಯಲಿದೆ. ಸುಸ್ಥಿರ ಭವಿಷ್ಯಕ್ಕಾಗಿ ನಾವೀನ್ಯತೆ, ಸಹಕಾರ ಮತ್ತು ರೂಪಾಂತರ ಎಂಬ ವಿಷಯಾಧಾರಿತ ಈ ಕಾರ್ಯಕ್ರಮವು ೭ನೇ ಬ್ರಿಕ್ಸ್ ಐಟಿಸಿ ಕಾರ್ಯ ಗುಂಪು ಸಭೆಯೊಂದಿಗೆ ಪ್ರಾರಂಭವಾಗಲಿದೆ. ಸಾರ್ವತ್ರಿಕ, ಅರ್ಥಪೂರ್ಣ, ಕೈಗೆಟುಕುವ, ಸುಸ್ಥಿರ ಮತ್ತು ಸ್ಥಿತಿಸ್ಥಾಪಕ ಸಂಪರ್ಕಕ್ಕಾಗಿ ಐಸಿಟಿ ಪರಿಸರ ವ್ಯವಸ್ಥೆ ಅಭಿವೃದ್ಧಿಪಡಿಸುವ ಬಗ್ಗೆ ಪ್ರತಿನಿಧಿಗಳು ಚರ್ಚೆ ನಡೆಸುವ ನಿರೀಕ್ಷೆ ಇದೆ.

**<>><><*><><<>**

ಇಂಡೋನೇಷ್ಯಾದಲ್ಲಿಂದು ಸಂಭವಿಸಿದ ೭.೭ ತೀವ್ರತೆಯ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ ೩೮ಕ್ಕೆ ಏರಿಕೆಯಾಗಿದೆ. ಪ್ರಬಲ ಭೂಕಂಪದ ಬಳಿಕ ಹಲವು ಕಂಪನಗಳಾಗಿದ್ದು, ರಕ್ಷಣಾ ತಂಡಗಳು ಕಾರ್ಯಾಚರಣೆ ನಡೆಸಿವೆ.  ದೇಶದ ಹಲವು ಭಾಗಗಳಲ್ಲಿ ಒಂದು ಮೀಟರ್‌ಗಿಂತ ಕಡಿಮೆ ಎತ್ತರದ ಸುನಾಮಿ ಅಲೆಗಳು ಕಾಣಿಸಿಕೊಂಡಿದ್ದು, ನಂತರ ಪರಿಸ್ಥಿತಿ ಸುಧಾರಿಸಿದೆ. ಹಾನಿಗೊಳಗಾದ ಪ್ರದೇಶಗಳಲ್ಲಿ ಕಟ್ಟಡಗಳೊಳಗೆ ಇನ್ನೂ ಕೆಲವರು ಸಿಲುಕಿರುವ ಸಾಧ್ಯತೆಯಿದೆ. ಭೂಕುಸಿತಗಳೂ ಸಂಭವಿಸಿದ್ದು, ಅವಶೇಷಗಳಿಂದಾಗಿ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ ಎಂದು ವರದಿಯಾಗಿದೆ.

**<>><><*><><<>**

ಶ್ರೀಲಂಕಾದ ಗಾಲೆ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ-ಶ್ರೀಲಂಕಾ ನಡುವಣ ಐಸಿಸಿ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಶಿಪ್ ನ ಮೊದಲ ಇನ್ನಿಂಗ್ಸ್ ನಲ್ಲಿಂದು ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ. ಭಾರತ ತಂಡ ಮೊದಲ ದಿನದಾಟದಂತ್ಯಕ್ಕೆ ೨ ವಿಕೆಟ್ ನಷ್ಟಕ್ಕೆ ೨೮೮ ರನ್ ಗಳಿಸಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><  ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**